# ಬೆಂಗಳೂರು ಉತ್ತರ ವಿಶ್ವವಿದ್ಯಾಲಯ

ಶ್ರೀ ದೇವರಾಜ ಅರಸು ಬಡಾವಣೆ, ಟಮಕ, ಕೋಲಾರ – 563 103

ಸಂ:ಬೆಂ.ಉ.ವಿ./ಡ್ರಗ್ ಪಿಡುಗು ನಿಯಂತ್ರಣ/ವಿ.ಸ.ಪ./2020-21/1416 ದಿನಾಂಕ: 11-09-2020

## ಸುತ್ತೋಲೆ

ವಿಷಯ: ಕಾಲೇಜು ಕ್ಯಾಂಪಸ್‌ನಲ್ಲಿ ಮಾದಕ ವಸ್ತು ಮತ್ತು ಡ್ರಗ್ ಜಾಲ / ಹಾವಳಿ ನಿಯಂತ್ರಣ ಮತ್ತು ತಡೆಗಟ್ಟುವಿಕೆ ಹಾಗೂ ವಿದ್ಯಾರ್ಥಿಗಳಲ್ಲಿ ಡ್ರಗ್ ಹಾವಳಿಯ ದುಷ್ಪರಿಣಾಮಗಳ ಬಗ್ಗೆ ಅರಿವು ಮೂಡಿಸುವ ಬಗ್ಗೆ.

****

ಸದರಿ ವಿಷಯಕ್ಕೆ ಸಂಬಂಧಿಸಿದಂತೆ ತಿಳಿಸುವುದೇನೆಂದರೆ, ರಾಜ್ಯದ ಹಾಗೂ ರಾಷ್ಟ್ರದ ವಿವಿದೆಡೆ ಡ್ರಗ್ ಜಾಲ ಮತ್ತು ಹಾವಳಿ ಮಿತಿ ಮೀರಿದ್ದು, ಇದರಿಂದ ನಾಗರೀಕರು ಅದರಲ್ಲೂ ಪ್ರಮುಖವಾಗಿ ಯುವಕರು ಹಾಗೂ ವಿದ್ಯಾರ್ಥಿಗಳು ಈ ದುಶ್ಚಟಕ್ಕೆ ಬಲಿಯಾಗುತ್ತಿರುವುದು ತುಂಬಾ ಆತಂಕಕಾರಿ ವಿಷಯ. ಈ ವಿಷಯಕ್ಕೆ ಸಂಬಂಧಿಸಿದಂತೆ ರಾಜ್ಯದ ಬೆಂಗಳೂರು ಮತ್ತು ಇತರೆ ನಗರ ಮತ್ತು ಗ್ರಾಮೀಣ ಪ್ರದೇಶಗಳಲ್ಲಿಯೂ ಘಟಿಸುತ್ತಿರುವ' ಕೆಟ್ಟ ಚಟುವಟಿಕೆಗಳ ಸಾಮಾಜಿಕ ಪರಿಸ್ಥಿತಿ ಮತ್ತು ವಿದ್ಯಾರ್ಥಿ ಹಾಗೂ ಯುವ ಜನತೆಯ ಸುರಕ್ಷತೆ, ಭವಿಷ್ಯ ಹಾಗೂ ಆರೋಗ್ಯದ ದೃಷ್ಟಿಯಿಂದ ತುಂಬಾ ಗಂಭೀರ ಸ್ವರೂಪವನ್ನು ಪಡೆದು ಕೊಳ್ಳುತ್ತಿರುವುದು ತುಂಬಾ ದುರದೃಷ್ಟಕರ. ಯು.ಜಿ.ಸಿ. ಮತ್ತು ರಾಜ್ಯ ಸರ್ಕಾರ ಈ ಬಗ್ಗೆ ಹಲವು ಕ್ರಮಗಳನ್ನು ಕೈಗೊಂಡಿದ್ದರೂ, ಈ ವಿಚಾರಗಳು ಇತ್ತಿಚಿಗೆ ತೀವ್ರ ಸ್ವರೂಪ ಪಡೆದುಕೊಳ್ಳುತ್ತಿರುವುದು ಗಂಭೀರ ವಿಷಯವಾಗಿದೆ.

ಮುಂದುವರಿದು ತಿಳಿಸುವುದೇನೆಂದರೆ, ವಿದ್ಯಾರ್ಥಿಗಳ ಆರೋಗ್ಯ, ಭವಿಷ್ಯ ಮತ್ತು ಸುರಕ್ಷತಾ ದೃಷ್ಠಿಯಿಂದ ಕಾಲೇಜು ಮತ್ತು ವಿಶ್ವವಿದ್ಯಾಲಯಗಳು ಹಲವಾರು ಪರಿಣಾಮಕಾರಿ ಮುನ್ನೆಚರಿಕೆ ಕ್ರಮಗಳನ್ನು ಯೋಜಿಸಿ ಕೈಗೊಳ್ಳುವುದು ಅತಿ ಆಧ್ಯತೆ ಮತ್ತು ತುರ್ತು ವಿಚಾರವಾಗಿದೆ. ಜೊತೆಗೆ ಡ್ರಗ್ ಜಾಲ, ಪಿಡುಗು ಮತ್ತು ಅದರ ದುಷ್ಪರಿಣಾಮಗಳ ಬಗ್ಗೆ ವಿದ್ಯಾರ್ಥಿಗಳಲ್ಲಿ ಅರಿವು ಮೂಡಿಸುವ ಬಗ್ಗೆ ಪರಿಣಾಮಕಾರಿ ಕಾರ್ಯಕ್ರಮಗಳನ್ನು ರೂಪಿಸುವುದರ ಜೊತೆಗೆ ಅವುಗಳನ್ನು ಅಷ್ಟೇ ಪರಿಣಾಮಕಾರಿಯಾಗಿ ಸಂಘಟಿಸಿ ಜಾರಿಗೊಳಿಸುವುದು ನಮ್ಮ ಕರ್ತವ್ಯ ಮತ್ತು ಜವಾಬ್ದಾರಿ.

ಮೇಲಿನ ವಿಚಾರಗಳ ಹಿನ್ನಲೆಯಲ್ಲಿ ಎಲ್ಲಾ ಕಾಲೇಜು ಪ್ರಾಂಶುಪಾಲರುಗಳು ತಮ್ಮ ಕಾಲೇಜು ಕ್ಯಾಂಪಸ್‌ನ ಒಳಗಡೆ ಮತ್ತು ಹೊರಗಡೆ (ಮಿತಿಯಲ್ಲಿ) ಮಾದಕ ವಸ್ತು ಮತ್ತು ಡ್ರಗ್ ಜಾಲದ ಯಾವುದೇ ಸಮಸ್ಯೆ ಮತ್ತು ಘಟನೆಗಳು ಸಂಭವಿಸದಂತೆ ಮತ್ತು ವಿದ್ಯಾರ್ಥಿಗಳಲ್ಲಿ ಈ ಬಗ್ಗೆ ಕ್ರಿಯಾತ್ಮಕವಾಗಿ ಅರಿವು ಮೂಡಿಸಲು ಈ ಕೆಳಕಂಡ ಕ್ರಮಗಳನ್ನು ಕೈಗೊಳುವುದು.

1. ಕಾಲೇಜು ಕ್ಯಾಂಪಸ್‌ನ ಒಳಗಡೆ ಇರುವ ಕಾಲೇಜು ಕ್ಯಾಂಟೀನ್, ಸ್ಟೇಷನರಿ ಅಂಗಡಿ, Xerox Outlet ಇತ್ಯಾದಿ ಸ್ಥಳಗಳಲ್ಲಿ ಡ್ರಗ್ ಮತ್ತು ಮಾದಕ ವಸ್ತುಗಳ ಮಾರಾಟ ಅಥವಾ ಲಭ್ಯತೆ ಇಲ್ಲದಿರುವ ಬಗ್ಗೆ ಜಾಗ್ರತೆ ಮತ್ತು ಮುನ್ನೆಚರಿಕೆ ಕ್ರಮ ಕೈಗೊಳ್ಳುವುದು.
2. ಕಾಲೇಜು ಕ್ಯಾಂಪಸ್‌ನ ಒಳಗೆ ಮತ್ತು ಹೊರಗೆ ವಿದ್ಯಾರ್ಥಿಗಳ ಚಲನವಲನದ ಬಗ್ಗೆ ಪೂರ್ಣ ನಿಗಾವಹಿಸಲು ಸಿ.ಸಿ.ಟಿ.ವಿ. ಕ್ಯಾಮಾರಾಗಳ ಅಳವಡಿಕೆ ಮತ್ತು ಈಗಾಗಲೇ ಅಳವಡಿಸಿದ್ದ'ರೆ ಅವುಗಳು ಸಮಸ್ಯೆ ರಹಿತವಾಗಿ ಕಾರ್ಯ ನಿರ್ವಹಿಸುತ್ತಿರುವಂತೆ ನೋಡಿಕೊಳ್ಳುವುದು. ಪ್ರತಿ ದಿನ ಸಿ.ಸಿ.ಟಿ.ವಿ. ಕ್ಯಾಮಾರದಲ್ಲಿ ರೆಕಾರ್ಡ್ ಆದ ದೃಶ್ಯಾವಳಿಗಳನ್ನು ಗಮನಿಸಿ ವಿವರಗಳನ್ನು ದಾಖಲಿಸಿಕೊಳ್ಳುವುದು.



Scanned with CamScanner

3. ಕಾಲೇಜು ಕ್ಯಾಂಪಸ್ ಒಳಗೆ ಅನಧಿಕೃತ ವ್ಯಕ್ತಿಗಳ ಆಗಮನ, ಕಾಲೇಜಿನಲ್ಲಿ ಅವರಿಗೆ ಇರುವ ಇತರೆ ಸಿಬ್ಬಂದಿ ಮತ್ತು ವಿಧ್ಯಾರ್ಥಿಗಳ ಸಂಪರ್ಕ ಇತ್ಯಾದಿಗಳ ಬಗ್ಗೆ ವಿಶೇಷ ಗಮನವಹಿಸುವುದು. ಅದರಲ್ಲೂ ಮುಖ್ಯವಾಗಿ ಅನಧಿಕೃತ ವ್ಯಕ್ತಿಗಳನ್ನು ಕಾರಣವಿಲ್ಲದೆ ಅನಗತ್ಯವಾಗಿ ಕಾಲೇಜು ಕ್ಯಾಂಪಸ್ ಒಳಗೆ ಪ್ರವೇಶಿಸದಂತೆ ಮುಖ್ಯ ದ್ವಾರದಲ್ಲಿಯೇ ತಡೆಗಟ್ಟುವುದು.

4. ಕಾಲೇಜು ಕ್ಯಾಂಪಸ್‌ನ ಹತ್ತಿರದ ಪೋಲಿಸ್ ಠಾಣೆ ಹಾಗೂ ಸದರಿ ವಿಷಯಕ್ಕೆ ಸಂಬಂಧಿಸಿದ ಸರ್ಕಾರಿ ಇಲಾಖಾ ಅಧಿಕಾರಿಗಳ ಜೊತೆ ಸಂಪರ್ಕ ಪಡೆದುಕೊಂಡು, ಸದರಿ ವಿಚಾರದಲ್ಲಿ ಕೈಗೊಳ್ಳಬೇಕಾದ ಕ್ರಮಗಳ ಬಗ್ಗೆ ಮಾಹಿತಿ ಮತ್ತು ಮಾರ್ಗಸೂಚಿಗಳನ್ನು ಪಡೆದು ಅಳವಡಿಸುವುದು.

5. ಡ್ರಗ್, ಮಾದಕವಸ್ತು ಇತ್ಯಾದಿ ಜಾಲದ ಬಗ್ಗೆ ವಿಧ್ಯಾರ್ಥಿಗಳು, ಸಿಬ್ಬಂದಿ ಹಾಗೂ ಇತರರ ಚಲನವಲನದ ಬಗ್ಗೆ ನಿಗಾವಹಿಸಿ ಮಾಹಿತಿ ನೀಡಲು ಎನ್.ಎಸ್.ಎಸ್. / ಎನ್.ಸಿ.ಸಿ. ವಿಧ್ಯಾರ್ಥಿ ತಂಡಗಳ ಸಹಕಾರದ ಮೂಲಕ ನಿಗಾ ವಹಿಸುವುದು ಮತ್ತು ಮಾಹಿತಿ ಪಡೆದು ಸೂಕ್ತ ಕ್ರಮ ಕೈಗೊಳ್ಳುವುದು.

6. ಕಾಲೇಜು ಕ್ಯಾಂಪಸ್‌ನ ಪ್ರಮುಖ ಸ್ಥಳಗಳಲ್ಲಿ (Important spots) ಡ್ರಗ್, ಮಾದಕ ವಸ್ತುಗಳ ದುಷ್ಪರಿಣಾಮಗಳು ಕಾನೂನು ಬಾಹಿರ ಚಟುವಟಿಕೆಗಳಿಗೆ ಇರುವ ಶಿಕ್ಷೆ, ನಾಗರೀಕರ ಜವಾಬ್ದಾರಿ ಇತ್ಯಾದಿ ವಿಚಾರಗಳ ಬಗ್ಗೆ Display Boards, ಭಿತ್ತಿ ಪತ್ರಗಳು, ಪುಸ್ತಕ ಪ್ರದರ್ಶನ, News Letters, Online ಉಪನ್ಯಾಸ ಇತ್ಯಾದಿಗಳ ಮೂಲಕ ಜಾಗೃತಿ ಮೂಡಿಸುವುದು.

ಸಹಕಾರಿ ಸಂಸ್ಥೆ ಮತ್ತು ಸಮಾಜದ ಇತರೆ ಸ್ವಯಂಸೇವಕ ಸಂಸ್ಥೆಗಳ ಸಹಭಾಗಿತ್ವದಲ್ಲಿ ಸೂಕ್ತ ಕಾರ್ಯಕ್ರಮಗಳನ್ನು ಆಯೋಜಿಸುವುದು.

7. ಕಾಲೇಜು ಮಟ್ಟದಲ್ಲಿ ಪ್ರಾಂಶುಪಾಲರ ಅಧ್ಯಕ್ಷತೆಯಲ್ಲಿ, ಪೋಲಿಸ್ ಇಲಾಖೆ, ಶಿಕ್ಷಕರು, ಶಿಕ್ಷಕೇತರರು ಆಡಳಿತ ಮಂಡಳಿ ಹಾಗೂ ವಿಧ್ಯಾರ್ಥಿಗಳನ್ನು ಒಳಗೊಂಡಂತೆ ಕ್ರಿಯಾಶೀಲ "ಜಾಗೃತ ಮತ್ತು ಸಲಹಾ ಸಮಿತಿ"ಯನ್ನು ರಚಿಸುವುದು ಮತ್ತು ಸದರಿ ಸಮಿತಿಯು ಪ್ರತಿ ತಿಂಗಳು ಸಭೆ ನಡೆಸಿ ಚರ್ಚಿಸಿ, ಅಗತ್ಯ ಕ್ರಮ ಕೈಗೊಳ್ಳುವುದು.

8. ಕಾಲೇಜು ಕ್ಯಾಂಪಸ್ ಸುತ್ತಳತೆಯ 100 ಅಡಿ (Radius of 100 ft) ಅಂತರದಲ್ಲಿ ಇರುವ ವಿವಿಧ ಅಂಗಡಿ, ಪಾನ್ ಷಾಪ್, ಹೋಟೆಲ್ ಮಾಲಿಕರ ಜೊತೆ ಸಂಪರ್ಕ ಸಭೆ ನಡೆಸಿ ಕಾನೂನು ಬಾಹಿರವಾಗಿ ಮಾದಕ ವಸ್ತುಗಳನ್ನು ಮಾರಾಟ ಮಾಡದಂತೆ ತಿಳಿಹೇಳುವುದು ಮತ್ತು ಅವರ ಸಹಕಾರವನ್ನು ಪಡೆದುಕೊಳ್ಳುವುದು.

9. ವಿದೇಶಿ ವಿಧ್ಯಾರ್ಥಿಗಳ ವಾಸಸ್ಥಳ, ವಿಧ್ಯಾರ್ಥಿನಿಲಯ, ಪಿ.ಜಿ. ಇತ್ಯಾದಿ ವಿವರಗಳನ್ನು ಪಡೆದುಕೊಂಡು, ಪ್ರತಿ ವಾರ ಆ ವಿಧ್ಯಾರ್ಥಿಗಳೊಡನೆ ಸದರಿ ವಿಷಯಕ್ಕೆ ಸಂಬಂಧಿಸಿದಂತೆ ಸಂಪರ್ಕ ಜಾಗೃತಿ ಮತ್ತು ವಿಚಾರ ವಿನಿಮಯ ಕಾರ್ಯಕ್ರಮಗಳನ್ನು ಆಯೋಜಿಸುವುದು.

ಈ ವಿಚಾರವನ್ನು ಆಧ್ಯತೆಯ ಮೇಲೆ ಪರಿಗಣಿಸುವುದು ಮತ್ತು ಯಾವುದೇ ಸಮಸ್ಯೆಗಳಾದರೆ, ಸಂಬಂಧಿಸಿದ ಸಂಸ್ಥೆಯ ಮುಖ್ಯಸ್ಥರೇ ಹೊಣೆಗಾರರಾಗುತ್ತಾರೆ.

ಕುಲಪತಿಗಳು

ಕುಲಪತಿಗಳು
ಬೆಂಗಳೂರು ಉತ್ತರ ವಿಶ್ವವಿದ್ಯಾಲಯ

ಗೆ,
ಬೆಂಗಳೂರು ಉತ್ತರ ವಿಶ್ವವಿದ್ಯಾಲಯದ ವ್ಯಾಪ್ತಿಯ ಎಲ್ಲಾ ಕಾಲೇಜು ಪ್ರಾಂಶುಪಾಲರುಗಳು.



Scanned with CamScanner

**ಪ್ರತಿಗಳು:**

1. ಮಾನ್ಯ ಅಪರ ಮುಖ್ಯ ಕಾರ್ಯದರ್ಶಿಗಳು, ಉನ್ನತ ಶಿಕ್ಷಣ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು – 560 001.
2. ಕಾರ್ಯದರ್ಶಿಗಳು, ಮಾನ್ಯ ಉಪಮುಖ್ಯಮಂತ್ರಿಗಳು, ಉನ್ನತ ಶಿಕ್ಷಣ, ಐ.ಟಿ.ಬಿ.ಟಿ. ಮತ್ತು ಕೌಶಲ್ಯಾಭಿವೃದ್ಧಿ ಇಲಾಖೆಗಳು, ಕರ್ನಾಟಕ ಸರ್ಕಾರ, ವಿಕಾಸಸೌಧ, ಬೆಂಗಳೂರು – 560 001.
3. ಆಯುಕ್ತರು, ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ನಿರ್ದೇಶನಾಲಯ, ಶೇಷಾದ್ರಿ ರಸ್ತೆ, ಬೆಂಗಳೂರು – 560 001.
4. ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು, ಉನ್ನತ ಶಿಕ್ಷಣ ಪರಿಷತ್ತು, ಪ್ರಸನ್ನ ಕುಮಾರ ಬ್ಲಾಕ್, ಸೆಂಟ್ರಲ್ ಕಾಲೇಜು ಆವರ, ಬೆಂಗಳೂರು – 560 001.
5. ನಿರ್ದೇಶಕರು, ಕಾಲೇಜು ಶಿಕ್ಷಣ ಇಲಾಖೆ, ಬೆಂಗಳೂರು – 560 001.
6. ಕುಲಸಚಿವರು / ಕುಲಸಚಿವರು (ಮೌಲ್ಯಮಾಪನ) / ವಿತ್ತಾಧಿಕಾರಿಗಳು / ನಿರ್ದೇಶಕರು ಸ್ನಾತಕೋತ್ತರ ಕೇಂದ್ರ, ಬೆಂಗಳೂರು ಉತ್ತರ ವಿಶ್ವವಿದ್ಯಾಲಯ, ಟಮಕ, ಕೋಲಾರ – 563 103.
7. ಕಛೇರಿ ಪ್ರತಿ.



Scanned with CamScanner